# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 663 |
| ಸದಸ್ಯರ ಹೆಸರು | ಶ್ರೀ ಬಿ.ಜಿ ಪಾಟೀಲ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 12-12-2025 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ<br>ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧೀನದಲ್ಲಿ ಬರುವ ವಸತಿ ನಿಲಯ, ವಸತಿ ಶಾಲೆಗಳ ಸಂಖ್ಯೆ ಎಷ್ಟು; | ಕಲಬುರಗಿ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 73 ಮೆಟ್ರಿಕ್ ಪೂರ್ವ ಹಾಗೂ 63 ಮೆಟ್ರಿಕ್ ನಂತರದ ಹೀಗೆ ಒಟ್ಟು 136 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ.<br><br>ಯಾದಗಿರಿ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 44 ಮೆಟ್ರಿಕ್ ಪೂರ್ವ ಹಾಗೂ 23 ಮೆಟ್ರಿಕ್ ನಂತರದ ಹೀಗೆ ಒಟ್ಟು 67 ವಿದ್ಯಾರ್ಥಿನಿಲಯಗಳು ಕಾರ್ಯ ನಿರ್ವಹಿಸುತ್ತಿವೆ.<br><br>**<u>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ</u>**<br><br>ಕಲಬುರಗಿ ಜಿಲ್ಲೆಯಲ್ಲಿ 44 ವಸತಿ ಶಾಲೆ / ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಈ ಪೈಕಿ 7 ಹಿಂದುಳಿದ ವರ್ಗದ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.<br><br>ಯಾದಗಿರಿ ಜಿಲ್ಲೆಯಲ್ಲಿ 21 ವಸತಿ ಶಾಲೆ / ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಈ ಪೈಕಿ 2 ಹಿಂದುಳಿದ ವರ್ಗದ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. |
| ಆ) | ಈ ಮೇಲ್ಕಂಡ ವಸತಿ ನಿಲಯ ಮತ್ತು ವಸತಿ ಶಾಲೆಗಳಲ್ಲಿ ಮೂಲ ಸೌಕರ್ಯಗಳಿಲ್ಲದೆ, ಮಕ್ಕಳಿಗೆ ನಿಯಮದಂತೆ ಸಮರ್ಪಕ ಊಟ, ಉಪಹಾರ ನೀಡದೆ ಇರುವುದರಿಂದ ಕಲ್ಯಾಣ ಕರ್ನಾಟಕ ಭಾಗದ ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಪೌಷ್ಟಿಕತೆ ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ಸೌಕರ್ಯದ ಜೊತೆಗೆ ಶೈಕ್ಷಣಿಕವಾಗಿ ಪೂರಕವಾಗಿ ಅಗತ್ಯ ಸೌಲಭ್ಯಗಳಾದ ಸಮವಸ್ತ್ರ (ನೈಟ್ ಡ್ರೆಸ್ ಮತ್ತು ಟ್ರ್ಯಾಕ್ ಸೂಟ್) ಅಲ್ಪಕಾಲಿಕ ಭೋದಕರ ವ್ಯವಸ್ಥೆ, ಪಠ್ಯ-ಪುಸ್ತಕ, ಲೇಖನ ಸಾಮಗ್ರಿಗಳು, ಶುಚಿ-ಸಂಭ್ರಮ ಕಿಟ್ ಜಮಖಾನ-ಹೊದಿಕೆ, ವೈದ್ಯಕೀಯ ಸೌಲಭ್ಯ, ದಿನಪತ್ರಿಕೆ, ಕ್ರೀಡಾ ಸಾಮಗ್ರಿಗಳನ್ನು ಒದಗಿಸಲಾಗಿರುತ್ತದೆ.<br><br>ಮೆಟ್ರಿಕ್-ನಂತರದ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ಸೌಕರ್ಯದ ಜೊತೆಗೆ ಜಮಖಾನ-ಹೊದಿಕೆ, ಶುಚಿ-ಸಂಭ್ರಮ ಕಿಟ್, ದಿನಪತ್ರಿಕೆ-ಮ್ಯಾಗಜಿನ್,ನೈಟ್ ಡ್ರೆಸ್ ಮತ್ತು ಟ್ರ್ಯಾಕ್ ಸೂಟ್, ಕ್ರೀಡಾ ಸಾಮಗ್ರಿ, ವೈದ್ಯಕೀಯ ಸೌಲಭ್ಯದ ಜೊತೆಗೆ ಶೈಕ್ಷಣಿಕ ಪೂರಕವಾಗಿ ನಿಲಯಗಳಲ್ಲಿ ವ್ಯಕ್ತಿತ್ವ ವಿಕಸನ, ವೃತ್ತಿ ಬುನಾದಿ ತರಬೇತಿ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಿಳುವಳಿಕೆ / ಮಾರ್ಗದರ್ಶನ ನೀಡುವ ಸಲುವಾಗಿ ಕಾರ್ಯಾಗಾರವನ್ನು ಆಯೋಜಿಸಲಾಗುತ್ತಿದೆ.<br><br>ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿನ ನಿಲಯಾರ್ಥಿಗಳಿಗೆ ಮಾಹೆಯಾನ ರೂ.1750/-ಗಳನ್ನು ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿನ ನಿಲಯಾರ್ಥಿಗಳಿಗೆ ರೂ.1850/-ಗಳನ್ನು ಭೋಜನಾ ವೆಚ್ಚ ಭರಿಸಲಾಗುತ್ತಿದೆ. |

| | | |
|---|---|---|
| | | ಮೇಲ್ಕಂಡ ಮಾಸಿಕ ಆಹಾರ ವೆಚ್ಚದಂತೆ ವಲಯವಾರು ನಿಗಧಿಪಡಿಸಲಾಗಿರುವ ಡಯಟ್ ಚಾರ್ಟ್‌ನ ಅನುಸಾರ ವಿದ್ಯಾರ್ಥಿಗಳಿಗೆ ಪೌಷ್ಟಿಕ ಮತ್ತು ಉತ್ತಮ ಗುಣಮಟ್ಟದ ಆಹಾರ ಒದಗಿಸಲಾಗುತ್ತಿದೆ.<br><br>**<u>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ</u>**<br><br>ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಯ ವಸತಿ ಶಾಲೆಗಳಿಗೆ ಸಂಘದಿಂದ ವಿಭಾಗವಾರು ಮೆನು ಚಾರ್ಟ್ ನಿಗಧಿಪಡಿಸಲಾಗಿದ್ದು, ಸದರಿ ಮೆನು ಚಾರ್ಟ್‌ನ್ನು ಎಲ್ಲಾ ಶಾಲೆ / ಕಾಲೇಜುಗಳಲ್ಲಿ ಅಳವಡಿಸಿ ಕೊಳ್ಳಲಾಗಿದ್ದು, ವಿದ್ಯಾರ್ಥಿಗಳಿಗೆ ಮೊಟ್ಟೆ, ಚಿಕನ್, ಮೀನು, ಹಾಲು, ಬಾಳೆಹಣ್ಣು, ಮಿಶ್ರಕಾಳು, ಸೊಪ್ಪು ಇತರೆ ಪೌಷ್ಠಿಕಾಂಶ ಭರಿತ ಆಹಾರವನ್ನು ನೀಡಲಾಗುತ್ತಿದೆ.<br><br>ಸರ್ಕಾರದ ಆದೇಶ ಸಂಖ್ಯೆ:ಸಕಇ 251 ಎಂಡಿಎಸ್ 2024, ದಿನಾಂಕ: 09.01.2025ರನ್ವಯ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿನ ವಸತಿ ಶಾಲೆ ಮತ್ತು ಕಾಲೇಜುಗಳ ವಿದ್ಯಾರ್ಥಿಗಳಿಗೆ ಪ್ರತಿ ಮಾಹೆ ತಲಾ ರೂ.100/-ಗಳ ವೆಚ್ಚದಲ್ಲಿ ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ ಮೈಸೂರು (CFTRI) ರವರು ಶಿಫಾರಸ್ಸು ಮಾಡಿರುವ ಪೌಷ್ಠಿಕಾಂಶದ ಪುಡಿ (Nutrition Powder) ಯನ್ನು ವಿದ್ಯಾರ್ಥಿಗಳ ಆರೋಗ್ಯ ಹಾಗೂ ಬಲವರ್ಧನೆಗಾಗಿ ನೀಡಲಾಗುತ್ತಿದೆ. ಸಂಘದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ / ಕಾಲೇಜು ಗಳಲ್ಲಿನ ಮಕ್ಕಳಲ್ಲಿ ಅಪೌಷ್ಟಿಕತೆ ಕಂಡು ಬಂದಿರುವುದಿಲ್ಲ.<br><br>ವಸತಿ ಶಾಲೆ / ಕಾಲೇಜುಗಳ ವಿದ್ಯಾರ್ಥಿಗಳಿಗೆ ನಿಗಧಿಪಡಿಸಿರುವ ಮೆನು ಚಾರ್ಟ್ ಪ್ರಕಾರ ಗುಣಮಟ್ಟದ ಆಹಾರವನ್ನು ನೀಡುತ್ತಿರುವ ಬಗ್ಗೆ ಖಾತರಿಪಡಿಸಿಕೊಳ್ಳಲು ಸೋಷಿಯಲ್ ಆಡಿಟ್ ಮಾಡುವ ಉದ್ದೇಶದಿಂದ ಸರ್ಕಾರದ ಆದೇಶ ಸಂಖ್ಯೆ:ಸಕಇ 260 ಎಂಡಿಎಸ್ 2024, ದಿನಾಂಕ: 06.02.2025ರಲ್ಲಿ ಆಹಾರ ವ್ಯವಸ್ಥೆಯ ಬಗ್ಗೆ ಪಾರದರ್ಶಕತೆಯನ್ನು ತರಲು ಸಾಮಾಜಿಕ ಪರಿಶೋಧನೆ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ.<br><br>ವಸತಿ ಶಾಲೆ / ಕಾಲೇಜುಗಳಲ್ಲಿನ ಪ್ರಾಂಶುಪಾಲರು / ನಿಲಯಪಾಲಕರು ಪ್ರತಿದಿನ 3 ಬಾರಿ X (formarly Twitter) ನಲ್ಲಿ ಆಹಾರ ಪದಾರ್ಥಗಳ ಛಾಯಾಚಿತ್ರವನ್ನು ಪೋಸ್ಟ್ ಮಾಡುವಂತೆ ಸೂಚಿಸಲಾಗಿದ್ದು, ಅದರಂತೆ ಎಲ್ಲಾ ವಸತಿ ಶಾಲೆ / ಕಾಲೇಜುಗಳ ಪ್ರಾಂಶುಪಾಲರು / ನಿಲಯಪಾಲಕರು X (formarly Twitter) ನಲ್ಲಿ ಆಹಾರ ಪದಾರ್ಥಗಳ ಛಾಯಾಚಿತ್ರವನ್ನು ಪೋಸ್ಟ್ ಮಾಡುತ್ತಿದ್ದಾರೆ. |
| ಇ) | ಸದರಿ ವಸತಿ ನಿಲಯಗಳಿಗೆ ಆಹಾರ ಹಾಗೂ ಇನ್ನಿತರ ಅಗತ್ಯ ವಸ್ತುಗಳ ಪೂರೈಕೆ ಮಾಡುವ ಟೆಂಡರ್ ಯಾರಿಗೆ ನೀಡಲಾಗಿದೆ ಹಾಗೂ ಇವರಿಗೆ ನೀಡುವ ಮಾಸಿಕ / ವಾರ್ಷಿಕ ಹಣವೆಷ್ಟು; ಒಬ್ಬ ವಿದ್ಯಾರ್ಥಿಗೆ ಮಾಸಿಕ ತಗಲುವ ವೆಚ್ಚ ಎಷ್ಟು; (ವಿವರ ನೀಡುವುದು); | ಕಲಬುರಗಿ ಜಿಲ್ಲೆಯ ವಸತಿ ನಿಲಯಗಳಿಗೆ ಆಹಾರ ಹಾಗೂ ಇನ್ನಿತರೆ ಅಗತ್ಯ ವಸ್ತುಗಳನ್ನು ಪೂರೈಕೆ ಮಾಡಲು ಶ್ರೀ ಸೌರಿ ರಾಜನ್ ಕೆ, ಸಿ.ಜಿ.ಇ.ಸಿ. ಸಿ.ಎಸ್.ಎಲ್, ಕೇಂದ್ರೀಯ ಭಂಡಾರ್, Community Center CPWD Quarters, ದೊಮ್ಮಲೂರು ಬೆಂಗಳೂರು-560071 ಇವರಿಗೆ ದಿನಾಂಕ: 01-01-2025ರಂದು ಆದೇಶ ನೀಡಲಾಗಿರುತ್ತದೆ. ಪ್ರತಿ ಮಾಹೆ ಅಂದಾಜು ರೂ.164.67 ಲಕ್ಷಗಳು ಮತ್ತು ವಾರ್ಷಿಕ ಅಂದಾಜು ರೂ.1844.30 ಲಕ್ಷಗಳು ಹಣವನ್ನು ಪಾವತಿಸಲಾಗುತ್ತಿದೆ. |

ಯಾದಗಿರಿ ಜಿಲ್ಲೆಯ ವಸತಿ ನಿಲಯಗಳಿಗೆ ಆಹಾರ ಹಾಗೂ ಇನ್ನಿತರ ಅಗತ್ಯ ವಸ್ತುಗಳ ಪೂರೈಕೆ ಮಾಡಲು ಶ್ರೀ ಸೌರಿ ರಾಜನ್ ಕೆ, (ಸಿ.ಜಿ.ಇ.ಸಿ.ಸಿ.ಎಸ್.ಎಲ್, ಕೇಂದ್ರೀಯ ಭಂಡಾರ್) ಬೆಂಗಳೂರು ಇವರಿಗೆ ಟೆಂಡರ್ ನೀಡಲಾಗಿರುತ್ತದೆ. ಪ್ರತಿ ಮಾಸಿಕ ಅಂದಾಜು ರೂ.80.14 ಲಕ್ಷಗಳು ಮತ್ತು ವಾರ್ಷಿಕ ಅಂದಾಜು ರೂ.874.98ಲಕ್ಷಗಳು ಹಣವನ್ನು ಪಾವತಿಸಲಾಗುತ್ತಿದೆ.

ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿನ ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ.1750/- ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿನ ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ.1850/-ಗಳನ್ನು ಭೋಜನಾ ವೆಚ್ಚವಾಗಿ ನೀಡಲಾಗುತ್ತಿದೆ.

**<u>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ</u>**

2024-25ನೇ ಸಾಲಿನ ಆಯ-ವ್ಯಯ ಭಾಷಣ ಕಂಡಿಕೆ 166ರಲ್ಲಿ ಪ್ರತಿ ವಿದ್ಯಾರ್ಥಿಗೆ ಪ್ರತಿ ಮಾಹೆಗೆ ರೂ. 100/-ಗಳ ಬೋಜನಾ ವೆಚ್ಚವನ್ನು ಹೆಚ್ಚಿಸಿದ್ದು, ಸಂಘದ ವಸತಿ ಶಾಲೆ / ಕಾಲೇಜಿನ ಪ್ರತಿ ವಿದ್ಯಾರ್ಥಿಗೆ ನಿಗದಿಪಡಿಸಲಾಗಿದ್ದ ರೂ.1850/-ಗಳ ಬೋಜನಾ ವೆಚ್ಚದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಸಕಇ 287 ಪಕವಿ 2024, ದಿನಾಂಕ:12.08.2024ರಲ್ಲಿ ರೂ.100/-ಗಳ ವೆಚ್ಚದಲ್ಲಿ ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ, ಮೈಸೂರು (CFTRI) ರವರು ಶಿಫಾರಸ್ಸು ಮಾಡಿರುವ ಪೌಷ್ಠಿಕಾಂಶದ ಪುಡಿಯನ್ನು (Nutrition Powder) ವಿತರಿಸಲು ಆದೇಶಿಸಲಾಗಿರುತ್ತದೆ.

ಆದೇಶ ಸಂಖ್ಯೆ:ಸಕಇ 251 ಎಂಡಿಎಸ್ 2024, 09.01.2025ರನ್ವಯ ನಿಯಮಾನುಸಾರ ಟೆಂಡರ್ ಆಹ್ವಾನಿಸಿ, ಅರ್ಹ ಬಿಡ್‌ದಾರರಿಗೆ ಸರಬರಾಜು ಆದೇಶ ನೀಡಲಾಗಿದ್ದು, ಸರಬರಾಜು ಮಾಡಲಾಗುತ್ತಿದೆ.

ಪಡಿತರ ಅಕ್ಕಿ, ಗೋಧಿ ಎತ್ತುವಳಿ, ಶುದ್ಧೀಕರಣ, ಮಿಲ್ಲಿಂಗ್, ಸಾಗಾಣಿಕಾ ವೆಚ್ಚ ಮತ್ತು ಗ್ಯಾಸ್ ಸಿಲಿಂಡರ್, ಹಾಲು ಖರೀದಿಗಾಗಿ ಪ್ರತಿ ವಿದ್ಯಾರ್ಥಿಗೆ ರೂ.350/- ಗಳನ್ನು ನಿಗದಿಪಡಿಸಿ ವಸತಿ ಶಾಲೆಯ ಜಂಟಿ ಖಾತೆಗೆ ಬಿಡುಗಡೆ ಮಾಡಲಾಗುತ್ತಿದೆ.

ಉಳಿಕೆ ರೂ.1400/-ರಲ್ಲಿ ಆಹಾರ ಪದಾರ್ಥಗಳ ಸರಬರಾಜಿಗೆ ಸರ್ಕಾರದ ಆದೇಶ ಸಂಖ್ಯೆ: ಸಕಇ-ಎಂಡಿಎಸ್/425/2022, ದಿನಾಂಕ: 18-09-2024 ಹಾಗೂ ದಿನಾಂಕ:30-10-2024ರ ತಿದ್ದುಪಡಿ ಆದೇಶದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರನ್ವಯ ಸಂಘದ ಕೇಂದ್ರ ಕಛೇರಿಯಿಂದ 2024-25ನೇ ಸಾಲಿನಿಂದ 2 ವರ್ಷಗಳ ಅವಧಿಗೆ ಟೆಂಡರ್ ಆಹ್ವಾನಿಸಿ ಅಂತಿಮಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿರುತ್ತದೆ. ಅದರಂತೆ 72 ಆಹಾರ ಪದಾರ್ಥಗಳ ಸರಬರಾಜಿಗೆ ಜಿಲ್ಲಾವಾರು ಟೆಂಡರ್ ಆಹ್ವಾನಿಸಿ, ಅರ್ಹ ಬಿಡ್‌ದಾರರಿಗೆ ಸರಬರಾಜು ಆದೇಶ ನೀಡಲಾಗಿರುತ್ತದೆ.

<table>
<tr>
<td></td>
<td></td>
<td>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಯ ವಸತಿ ಶಾಲೆ/ಕಾಲೇಜುಗಳಿಗೆ ವ್ಯಾಸಂಗ ಮಾಡುತ್ತಿರುವ ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ. 1400/-ರಂತೆ 2 ವರ್ಷಗಳ ಅವಧಿಗೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲು ಈ ಕೆಳಕಂಡ ಸರಬರಾಜುದಾರರಿಗೆ ಸರಬರಾಜು ಆದೇಶ ನೀಡಲಾಗಿರುತ್ತದೆ.
<table>
<tr><th>ಜಿಲ್ಲೆಯ ಹೆಸರು</th><th>ಸರಬರಾಜುದಾರ ಸಂಸ್ಥೆಯ ಹೆಸರು</th><th>ಟೆಂಡರ್ ಮೊತ್ತ (ರೂ.ಗಳಲ್ಲಿ)</th><th>ಸರಬರಾಜಿನ ಅವಧಿ</th></tr>
<tr><td>ಕಲಬುರಗಿ</td><td>ಶಿವಶಕ್ತಿ ದಾಲ್ ಇಂಡಸ್ಟ್ರೀಸ್</td><td>31,43,66,319-00</td><td>ಜುಲೈ 2025 ರಿಂದ 2 ವರ್ಷಗಳ ಅವಧಿ</td></tr>
<tr><td>ಯಾದಗಿರಿ</td><td>ಬಸವೇಶ್ವರ ಎಂಟರ್‌ಪ್ರೈಸಸ್</td><td>15,14,25,146-00</td><td>ಆಗಸ್ಟ್ 2025 ರಿಂದ 2 ವರ್ಷಗಳ ಅವಧಿ</td></tr>
</table>
</td>
</tr>
<tr>
<td>ಈ)</td>
<td>ವಸತಿ ನಿಲಯ/ ವಸತಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ಸುಳ್ಳು ಲೆಕ್ಕ ತೋರಿಸಿ ವಾರ್ಡನ್ ಹಾಗೂ ಗುತ್ತಿಗೆದಾರ ಮತ್ತು ಇಲಾಖೆ ಅಧಿಕಾರಿಗಳು ಹೊಂದಾಣಿಕೆ ಮಾಡಿಕೊಂಡು ಭ್ರಷ್ಟಾಚಾರ ಎಸಗಿರುವುದರ ಬಗ್ಗೆ ಲೋಕಾಯುಕ್ತ ದಾಳಿ ವೇಳೆ ಪತ್ತೆಯಾಗಿದ್ದು, ಇದಕ್ಕೆ ಹೊಣೆಗಾರರು ಯಾರು; ಇವರ ವಿರುದ್ಧ ಕೈಗೊಂಡ ಕ್ರಮಗಳೇನು? (ಕಲಬುರಗಿ ಲೋಕಾಯುಕ್ತರು ನೀಡಿರುವ ವರದಿ ನೀಡುವುದು);</td>
<td>ಮಾನ್ಯ ಲೋಕಾಯುಕ್ತರು ದಿನಾಂಕ:11-11-2025ರಂದು ಕಲಬುರಗಿ ಜಿಲ್ಲೆಯ 07 ವಸತಿ ನಿಲಯಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದು, ವರದಿ ನೀಡಿರುವುದಿಲ್ಲ, ಹಾಗೂ ದಿನಾಂಕ:15-11-2025 ರಂದು ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯ(BCWD-2553) ಸುರಪುರ ಇಲ್ಲಿಗೆ ಭೇಟಿ ನೀಡಿ ಪರಿಶೀಲಿಸಿದ್ದು, ವರದಿ ನೀಡಿರುವುದಿಲ್ಲ.</td>
</tr>
</table>

ಸಂಖ್ಯೆ:ಹಿಂವಕ 1213 ಬಿಂಎಂಎಸ್ 2025

(ಶಿವರಾಜ.ಎಸ್.ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.